# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 48 / 2018

ಸಿಡಬ್ಲ್ಯೂ- 10
ಪಿಡಬ್ಲ್ಯೂ-01

ದಿನಾಂಕಃ **16.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಶ್ರೀನಿವಾಸರೆಡ್ಡಿ |
| ತಂದೆಯ ಹೆಸರುಃ | - | ನಾಗರೆಡ್ಡಿ |
| ವಯಸ್ಸುಃ | -? | 52 ವರ್ಷ |
| ಉದ್ಯೋಗಃ | - | ಆರಕ್ಷಕ ಉಪ ನೀರಿಕ್ಷಕರು ಗ್ರಾಮೀಣ ಪೋ.ಠಾಣೆ ಯಾದಗಿರಿ. |
| ವಾಸಸ್ಥಳಃ | - | ಯಾದಗಿರಿ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

2017 ರಿಂದ 2021 ರ ವರೇಗೆ ನಾನು ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 25.07.2017 ರಂದು ಚಾಸಾ-16 ರವರ ಆದೇಶದ ಮೇರೆಗೆ ಯಾದಗಿರಿ ನಗರದಲ್ಲಿ ನಾನು ಹಾಗೂ ಚಾಸಾ-9 ರವರು ಠಾಣೆಯಲ್ಲಿದ್ದಾಗ ಚಾಸಾ-16 ರವರು ಮಧ್ಯರಾತ್ರಿ 12 ಗಂಟೆಗೆ ಬಂದು ನಮ್ಮನ್ನು ಗಸ್ತು ಕರ್ತವ್ಯಕ್ಕೆ ಕರೆದಕೊಂಡು ಹೋದರು. ನಾವು ಗಸ್ತು ಕಾರ್ಯವನ್ನು ನಿರ್ವಹಿಸುತ್ತಿದ್ದಾಗ ಲಕ್ಷ್ಮೀ ಗುಡಿ ಹತ್ತಿರ ಒಬ್ಬ ಹೆಣ್ಣು ಮಗಳು ಪ್ಲಾಸ್ಟೀಕ್ ಚೀಲವನ್ನು ಹಿಡಿದುಕೊಂಡು ಗುಡಿಯ ಪಕ್ಕದಲ್ಲಿ ಮರೆಮಾಚಿ ನಿಂತಿದ್ದಳು. ನಾವು ಜೀಪನ್ನು ನಿಲ್ಲಿಸಿ ಸದರಿ ಮಹಿಳೆಯನ್ನು ವಿಚಾರಿಸಿದ್ದೇವು ಆವಾಗ ಸದರಿ ಮಹಿಳೆಯ ಹತ್ತಿರ ಇರುವ ಪ್ಲಾಸ್ಟಿಟಕ ಗೊಬ್ಬರ ಚೀಲ ಇತ್ತು ನಮ್ಮಗೆ ಅವಳ ಮೇಲೆ ಸಂಶಯ ಬಂದು ವಿಚಾರಣೆ ಮಾಡಿದ್ದೇವು. ಸದರಿ ಮಹಿಳೆಯು ತನ್ನ ಹೆಸರು ಜಯಶ್ರೀ ಗಂಡ ಕನ್ವರ್ ಉಪಾಧ್ಯ, ವಯಸ್ಸು 28 ಇರುತ್ತದೆ ಎಂದು ತಿಳಿಸಿದ್ದಳು. ಸದರಿ ಮಹಿಳೆಯ ಹತ್ತಿರ ಇದ್ದ ಗೊಬ್ಬರಿ ಚೀಲವನ್ನು ಪರಿಶೀಲನೆ ಮಾಡಿದ್ದೇವು. ಸದರಿ ಚೀಲದಲ್ಲಿ ಒಂದು ಸ್ಕ್ರೂ ಡ್ರೇವರ್, ಒಂದು ಕಬ್ಬಿಣದ ರಾಡು ಇವುಗಳು ದೊರತ್ತವು. ಸದರಿ ಸ್ಥಳಕ್ಕೆ ನಮ್ಮ ಠಾಣೆಯ

ಮಹಿಳಾ ಪೊಲೀಸ್ ಪೇದೆ ಚಾಸಾ-11 ಡಬ್ಲ್ಯೂ ಪಿಸಿ ನಂಃ 104 ರವರನ್ನು ಚಾಸಾ-16 ರವರು ಬರಮಾಡಿಕೊಂಡು ಸದರಿ ಮಹಿಳೆಯನ್ನು ಠಾಣೆಗೆ ಕರೆ ತಂದರು. ಠಾಣೆಯಲ್ಲಿ ಸದರಿ ಮಹಿಳೆಯನ್ನು ಚಾಸಾ-16 ರವರು ವಿಚಾರಣೆ ಮಾಡಿದರು. ದಿನಾಂಕಃ 23.07.2017 ರಂದು ಬೆಳಗ್ಗೆ 9-30 ಗಂಟೆಗೆ ಉಪಕಾರಗೃಹದ ಹಿಂದುಗಡೆ ಇರುವ ಪಿ.ಡಬ್ಲ್ಯೂ ಡಿ ವಸತಿ ಗೃಹಕ್ಕೆ ಬೀಗ ಹಾಕಿತ್ತು. ಸದರಿ ಮನೆಯ ಹಿಂದುಗಡೆಯ ಬಾಗಿಲು ಮುರಿದು ಮನೆಯ ಒಳಗಡೆ ಹೋಗಿ ಮನೆ ಕಳ್ಳತನ ಮಾಡಿರುತ್ತೇನೆ ಎಂದು ಸದರಿ ಮಹಿಳೆಯು ಚಾಸಾ-16 ರವರಿಗೆ ತಿಳಿಸಿದ್ದರು. ಅದೇ ದಿನ ಮದ್ಯಾಹ್ನ 1 ಗಂಟೆಗೆ ಇನ್ನೊಂದು ಮನೆಯನ್ನು ಕಳ್ಳತನ ಮಾಡಿರುತ್ತೇನೆ ಎಂದು ಸದರಿ ಮಹಿಳೆಯು ಚಾಸಾ-16 ರವರಿಗೆ ತಿಳಿಸಿದ್ದರು. ನಂತರ ಚಾಸಾ-16 ರವರು ಇಬ್ಬರ ಪಂಚರಾದ ಚಾಸಾ-4 ಮತ್ತು 5 ರವರನ್ನು ಠಾಣೆಗೆ ಬರಮಾಡಿಕೊಂಡಿದ್ದರು. ಚಾಸಾ-4 ಮತ್ತು 5 ರವರ ಸಮಕ್ಷಮದಲ್ಲಿ ಕಬ್ಬಿಣದ ರಾಡು ಮತ್ತು ಸ್ಕ್ರೂ ಡೈವರ್ ಹಾಗೂ ಪ್ಲಾಸ್ಟಿಕ್ ಚೀಲವನ್ನು ಜಪ್ತಿಪಡಿಸಿಕೊಂಡಿದರು. ಸದರಿ ಮಹಿಳೆಯು ಕಳ್ಳತನ ಮಾಡಿದ ಬಂಗಾರವನ್ನು ಕಲುಬುರಗಿಯ ಎಸ್ ಎಂ ಕೃಷ್ಣ ಬಡಾವಣೆಯ ಹತ್ತಿರ ಇರುವ ಮನೆಯ ಗೋಡೆಯ ಪಕ್ಕದಲ್ಲಿ ನೀಲಿ ಬಣ್ಣದ ಪ್ಲಾಸ್ಟಿಕ ಬಂಗಾರ ಇಟ್ಟಿದ್ದೇನೆ ಎಂದು ತಿಳಿಸಿದ್ದಳು. ಸದರಿ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋದರೆ ನಾನು ನಿಮ್ಮಗೆ ಸದರಿ ಸ್ಥಳವನ್ನು ತೋರಿಸುತ್ತೇನೆ ಎಂದು ತಿಳಿಸಿದ್ದಳು. ಚಾಸಾ-4 ಮತ್ತು 5, ಚಾಸಾ-11, ಆರೋಪಿ, ನಾನು ಮತ್ತು ಚಾಸಾ-12 ನಮ್ಮೆಲ್ಲರನ್ನೂ ಚಾಸಾ-16 ರವರು ಜೀಪಿನಲ್ಲಿ ಬೆಳಗ್ಗೆ 8 ಗಂಟೆಗೆ ಯಾದಗಿರಿಯನ್ನು ಬಿಟ್ಟು ಬೆಳಗ್ಗೆ 9-45 ಗಂಟೆಗೆ ಆರೋಪಿತಳ ಮನೆಗೆ ಹೋದೇವು. ಅಲ್ಲಿ ಪಂಚರ ಸಮಕ್ಷಮದಲ್ಲಿ ತಾನು ನೀಲಿ ಪ್ಲಾಸ್ಟಿಕ ಕವರ್ ದಲ್ಲಿ ಮುಚ್ಚಿಟ್ಟಿದ್ದ ಬಂಗಾರವನ್ನು ಜಪ್ತಿಪಡಿಸಿಕೊಂಡೇವು. ನಂತರ ನಾವು ಮದ್ಯಾಹ್ನ 12-30 ಗಂಟೆಗೆ ಮರಳಿ ಠಾಣೆಗೆ ಬಂದೇವು. ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈ ಪ್ರಕರಣದ ಆರೋಪಿತಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಪ್ಲಾಸ್ಟಿಕ ಚೀಲವನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ಸ್ಕ್ರೂ ಡೈವ್, ಕಬ್ಬಿಣದ ರಾಡು ಮತ್ತು ಪ್ಲಾಸ್ಟೀಕ ಚೀಲ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಸಿ.ಸಿ. ನಂಃ 542/2017 ರಲ್ಲಿ ಮುದ್ದೆ ಮಾಲು 1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್.ರವರಿಂದಃ</u>

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಹೇಳಿಕೆಯನ್ನು ಚಾಸಾ-16 ರವರ ಮುಂದೆ ನೀಡಿದ್ದೆ. ಯಾದಗಿರಿ ನಗರದಲ್ಲಿ ನಾವು ಗಸ್ತು ಮಾಡಿದ್ದೇವು. ಬಸವೇಶ್ವರ ನಗರ ಕಡೆಯಿಂದ ಲಕ್ಷ್ಮೀ ನಗರಕ್ಕೆ ಬಂದೇವು. ಲಕ್ಷ್ಮೀ ಗುಡಿಯ ಪಕ್ಕದಲ್ಲಿ 4 ರಸ್ತೆಗಳು ಇರುತ್ತವೆ. ನಾವು

ನ್ಯಾಯಾಲಯದ ರಸ್ತೆಯ ಕಡೆಯಿಂದ ಬಂದೇವು. ಲಕ್ಷ್ಮೀ ಗುಡಿಯ ಕಂಪೌಂಡ ಪಕ್ಕದಲ್ಲಿ ಸದರಿ ಮಹಿಳೆ ನಿಂತಿದ್ದಳು. ಚಾಸಾ-16 ರವರು ಮಹಿಳೆಯ ಹತ್ತಿರ ಇದ್ದ ಮುದ್ದೆ ಮಾಲು 1 ನ್ನು ಪರಿಶೀಲನೆ ಮಾಡಿದ್ದರು. ಈ ಪ್ರಕರಣದಲ್ಲಿ ದೂರನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಠಾಣೆಯ ಪುಸ್ತಕದಲ್ಲಿ ನಾನು ಗಸ್ತು ಕರ್ತವ್ಯದ ಮೇಲೆ ಹೋಗಿದ್ದೆ ಎಂದು ಬರೆದಿರುವುದಿಲ್ಲ. ಪಂಚರು ಯಾವ ಊರಿನವರು ಇರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮುದ್ದೆ ಮಾಲು 1 ರಿಂದ 3 ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ ಆದರೆ ಇವುಗಳೆಲ್ಲವು ಚೀಲದಲ್ಲಿ ಇದ್ದವು ಎಂದು ಹೇಳುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-16 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿತಳಿಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 3 ಕ್ಕೂ ಹಾಗೂ ಆರೋಪಿತಳಿಗೂ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-4,5,11 ಹಾಗೂ ಚಾಸಾ-16 ರವರು ಕೂಡಿ ಕಲಬುರಗಿಯ ಎಸ್ ಎಂ ಕೃಷ್ಣ ಬಡಾವಣೆಯಲ್ಲಿ ಇರುವ ಆರೋಪಿತಳ ಮನೆಗೆ ಹೋಗಿ ಆರೋಪಿತಳು ಬಚ್ಚಿಟ್ಟಿದ ಒಂದು ನೀಲಿ ಬಣ್ಣದ ಪ್ಲಾಸ್ಟೀಕ್ ಚೀಲದಲ್ಲಿ ಇರುವ ಬಂಗಾರವನ್ನು ತೋರಿಸಿದ್ದಳು ಎಂದರೆ ಸರಿಯಲ್ಲ. ಸದರಿ ಬಂಗಾರವನ್ನು ಚಾಸಾ-16 ರವರು ಚಾಸಾ-4 ಮತ್ತು 5 ರವರ ಸಮಕ್ಷಮ ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಜಪ್ತಿಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.